ನಿಯೋಗವಾಗುತ್ತಿದ್ದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸುತ್ತು ಗಿಡಗಳನ್ನು ಕಡಿಯಲಿಕ್ಕೆ ಒಪ್ಪಿಗೆ ಕೊಡಸಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಅರಣ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಜಿ.ಎಸ್. ಬಾಗಲಕೋಟ್.—ಮಾನ್ಯ ಅಧ್ಯಕ್ಷರೇ ಇದಕ್ಕೆ ಸಂಬಂಧಪಟ್ಟಂತೆ ಹೇಳಿಕೆ ಈ ರೀತಿ ಇದೆ.—

ರಾಣೇಬೆನ್ನೂರು ತಾಲ್ಲೂಕ ಪೆಡ್ಲೇರಿ ಮಂಡಲ್ ಪಂಚಾಯಿತಿಯಿಂ ಸರ್ವೆ ನಂ. ೧೯೨ ದಲ್ಲಿ ಅರಣ್ಯ ಇಲಾಖೆಯ ಖರ್ಚಿನಿಂದ ೧೯೮೧ ರಲ್ಲಿ ನೀಲಗಿರಿ ತೋಪು ಬೆಳೆಸಿದೆ. ಇದಕ್ಕೆ ಒಟ್ಟು ರೂ. ೨೭,೨೪೧–೩೮ ಅರಣ್ಯ ಇಲಾಖೆಯ ಹಣ ಖರ್ಚಾಗಿದೆ.

ನೀಲಗಿರಿ ನೆಡುತೋಪು ಸಾಧಾರಣವಾಗಿ ಇಂಥಹ ಸ್ಥಳಗಳಲ್ಲಿ ಹತ್ತು ವರ್ಷಕ್ಕೆ ಕಡತಲೆ ಮಾಡಬೇಕು. ಆದರೂ ಪಂಚಾಯತಿಯವರು ೭ನೆಯ ವರ್ಷದಲ್ಲಿ ಕಡತಲೆ ಮಾಡಲು ಕೋರಿರುತ್ತಾರೆ. ಸಾಮಾಜಿಕ ಅರಣ್ಯ ನೆಡುತೋಪುಗಳ ಉತ್ಪತ್ತಿ ಹಂಚಿಕೆಯನ್ನು ಸರ್ಕಾರ ಈಗಾಲೇ ಶೇಕಡ ೫೦ ರಷ್ಟನ್ನು ಸಂಬಂಧಪಟ್ಟ ಗ್ರಾಮಂಗಳಿಗೆ ಕೊಡುವುದಾಗಿ ತೀರ್ಮಾನಿಸಲಾಗಿದೆ.

ಇದಲ್ಲದೇ ಬೇರೆ ಬೇರೆ ಯೋಜನೆಗಳಲ್ಲಿಯೂ ನೆಡುತೋಪುಗಳನ್ನು ಬೆಳೆಸಿದ್ದು, ಅವುಗಳ ಉತ್ಪತ್ತಿಯ ಹಂಚಿಕೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇದರಲ್ಲಿ ಗಮನದಲ್ಲಿಡಬೇಕಾದ ಮುಖ್ಯಾಂಶ ಏನೆಂದರೆ ಈ ನೆಡುತೋಪುಗಳಲ್ಲಿ ಬಂದ ಉತ್ಪತ್ತಿ ಆಯಾಯ ಗ್ರಾಮಂಗಳಿಗೆ ಸೇರತಕ್ಕದ್ದು. ಮತ್ತು ಈ ನೆಡುತೋಪುಗಳಿಂದ ಬಂದ ಸೌದೆ, ಮೇವು, ಕಟ್ಟಿಗೆ ಆಯಾ ಗ್ರಾಮಂಗಳ ಬಡಜನರಿಗೆ ವಿತರಣೆ ಮಾಡುವುದು. ಈ ಅಂಶಗಳನ್ನು ಗಮನದಲ್ಲಿಟ್ಟು ಸರ್ಕಾರ ಇಷ್ಟರಲ್ಲಿಯೇ ತೀರ್ಮಾನ ತೆಗೆದುಕೊಳ್ಳುವುದು.

8. ಕಾಪು ಕ್ಷೇತ್ರದ ಪೋಲೀಸ್ ಔಟ್ ಪೋಸ್ಟನ್ನು ಪೂರ್ಣ ಪ್ರಮಾಣದ ಪೋಲೀಸ್ ಠಾಣೆಯನ್ನಾಗಿ ಹಾಗೂ ಪೋಲೀಸರಿಗೆ ಗೃಹ ವಸತಿಯನ್ನು ಒದಗಿಸುವುದು.

ಶ್ರೀ ವಸಂತ ವಿ. ಸಾಲಿಯಾನ,—ಮಾನ್ಯ ಅಧ್ಯಕ್ಷರೇ, ಕಾಪು ಕ್ಷೇತ್ರದ ಕಾಪುವಿನ ಔಟ್ ಪೋಸ್ಟ್ ಪೋಲೀಸ್ ಠಾಣೆಯ ವ್ಯಾಪ್ತಿಗೆ, ಕರಾವಳಿ ಪ್ರದೇಶಗಳು, ಗ್ರಾಮೀಣ ಪ್ರದೇಶಗಳು, ಹಲವಾರು ದೇವಾಲಯ ಮಸೀದಿ, ಚರ್ಚ್ ಶಾಲಾ ಕಾಲೇಜು ಕೂಡಿಕೊಂಡಿರುತ್ತದೆ. ರಾತ್ರಿ ಸಮಯದಲ್ಲಿ ಒಬ್ಬ ಸೆಂಟ್ರಿ ಇದ್ದು ಕಾರ್ಯ ನಿರ್ವಹಿಸಲು ಅಸಾಧ್ಯ. ಆಲ್ಲಿಯ ಪೋಲೀಸ್‌ಗಳಿಗೆ ವಸತಿ ಗೃಹ ನಿರ್ಮಿಸಲು ಬೇಕಾದ ಜಾಗ ಮಂಜೂರಾತಿಯಾಗಿ ಸುಮಾರು ೨೦ ವರ್ಷಗಳಾಯಿತು. ಈ ತನಕ ವಸತಿ ಗೃಹ ನಿರ್ಮಾಣವಾಗಲಿಲ್ಲ. ಸರ್ಕಾರವು ಈ ವಿಚಾರಗಳನ್ನು ಪರಿಶೀಲಿಸಿ ಕಾಪುವಿಗೆ ಒಂದು ಪೂರ್ಣ ಪ್ರಮಾಣದ ಪೋಲೀಸ್ ಠಾಣೆ ಮತ್ತು ಪೋಲೀಸರಿಗೆ ವಸತಿ ಗೃಹ ಕೂಡಲೇ ಒದಗಿಸಿಕೊಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್, ಎಲ್. ಜಾಲಪ್ಪ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ಈಗ ಕಾಪು ಕ್ಷೇತ್ರದಲ್ಲಿ ಪೋಲೀಸ್ ಔಟ್‌ಪೋಸ್ಟ್ ಇದ್ದು ಒಂದು ಹೆಚ್. ಸಿ. ಮತ್ತು ನಾಲ್ಕು ಪೋಲೀಸ್ ಕಾನ್ಸ್‌ಟೇಬಲ್ ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ಈ ಕಾಪು ಪೋಲೀಸ್ ಔಟ್ ಪೋಸ್ಟನ್ನು ಪೂರ್ಣ ಪ್ರಮಾಣದ ಪೋಲೀಸ್ ಠಾಣೆಯಾಗಿ ಪರಿವರ್ತಿಸುವ ಪ್ರಸ್ತಾವವು ಮಂಜೂರಾತಿಗಾಗಿ ಸರ್ಕಾರ ಪರಿಶೀಲನೆಯಲ್ಲಿದ್ದು ಈ ಪ್ರಸ್ತಾವವನ್ನು ಮಿತವ್ಯಯದ ಆದೇಶ ಹಿಂತೆಗೆದುಕೊಂಡ ನಂತರ ಕಳುಹಿಸಲಾಗುವುದು ಎಂದು ಈ ಕಛೇರಿ ಪತ್ರ ಸಂಖ್ಯೆ ಪಿಸಿ/ಆರ್‌ಎಲ್‌ಎನ್–೫/೮೫–೮೪ ದಿನಾಂಕ ೧–೨–೧೯೮೪ರಲ್ಲಿ ಸರ್ಕಾರಕ್ಕೆ ತಿಳಿಸಲಾಗಿದೆ.

ಕಾಪು ಪೋಲೀಸ್ ಔಟ್‌ಪೋಸ್ಟ್ ಸಿಬ್ಬಂದಿಯವರಿಗೆ ವಸತಿ ಗೃಹಗಳ ನಿರ್ಮಾಣಕ್ಕಾಗಿ ಜಮೀನು ಇಲಾಖೆಯ ವಶದಲ್ಲಿರುತ್ತದೆ, ಆರ್ಥಿಕ ಮಂಗ್ಗಟ್ಟಿನಿಂದಾಗಿ ಈವರೆವಿಗೂ ಇಲ್ಲಿನ ಪೋಲೀಸ್ ಸಿಬ್ಬಂದಿಗೆ ವಸತಿ ಗೃಹಗಳ ನಿರ್ಮಾಣದ ಕೆಲಸವನ್ನು ಕೈಗೊಳ್ಳಲಾಗಲಿಲ್ಲ.

ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮವು ರಾಜ್ಯಾದ್ಯಂತ ಅವಶ್ಯವಿರುವ ಪೋಲೀಸ್ ವಸತಿ ಗೃಹಗಳನ್ನು ಹಂತ ಹಂತವಾಗಿ ಕಟ್ಟುವ ಯೋಜನೆಯನ್ನು ಹೊಂದಿದೆ. ಇದರಂತೆ

ಕಾಪು ಪೋಲೀಸ್ ಸಿಬ್ಬಂದಿ ವರ್ಗಕ್ಕೂ ಸಹ ವಸತಿ ಸೌಕರ್ಯವನ್ನು ಹಂತ ಹಂತದ ಯೋಜನೆಯಲ್ಲಿ ಒದಗಿಸಲಾಗುವುದು.

೯) ಸಿಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಅನೇಕ ಕೊಳವೆ ಬಾವಿಗಳು ವಿಫಲವಾಗಿರುವ ಬಗ್ಗೆ,

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಸಿಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ೧೯೮೩ ರಿಂದ ಈವರೆಗೆ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳನ್ನು ತೆಗೆಸಿದ್ದು, ಅವುಗಳಲ್ಲಿ ಅನೇಕ ಬಾವಿಗಳು ವಿಫಲವಾಗಿದ್ದು, ಜನತೆಗೆ ಯಾವುದೇ ರೀತಿಯಲ್ಲಿ ಉಪಯೋಗವಾಗಿರುವುದಿಲ್ಲ. ಆದ್ದರಿಂದ ಈ ವರೆಗೆ ಮೇಲ್ಕಂಡ ೨ ತಾಲ್ಲೂಕುಗಳಲ್ಲಿ ತೆಗೆಸಿರುವ ಬಾವಿಗಳ ಸಂಖ್ಯೆ ಹಾಗೂ ವಿಫಲವಾಗಿರುವ ಬಾವಿಗಳ ಸಂಖ್ಯೆಯನ್ನು ಈ ಸದನಕ್ಕೆ ತಿಳಿಸುವುದಲ್ಲದೆ, ಕುಡಿಯುವ ನೀರಿಗಾಗಿ ಕೈಗೊಂಡಿರುವ ಪರ್ಯಾಯ ಕಾರ್ಯಕ್ರಮವನ್ನು ತಿಳಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

೧೦) ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಇರುವ ಸಮಸ್ಯೆಗಳನ್ನು ನಿವಾರಣೆ ಮಾಡುವುದು.

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗೆ ಪ್ರಾರಂಭದಿಂದಲೇ ಬಹಳಷ್ಟು ಬಾಲಾರಿಷ್ಟ ನಿಗದಿತ ವೇಳೆಗೆ ಕಟ್ಟಡ ಪೂರ್ಣವಾಗದೆ, ಕಾರ್ಖಾನೆ ಆರಂಭ ವಿಳಂಬವಾಯಿತು. ಇತ್ತೀಚಿನ ಎರಡು ವರ್ಷಗಳಲ್ಲಿ ಕಬ್ಬು ಬೆಳೆಸಲು ರೈತರು ಬಹಳಷ್ಟು ಆಸಕ್ತಿ ತೋರಿಸುತ್ತಿದ್ದರೂ, ಈ ಕುರಿತು ಇಲಾಖೆಯ ಕ್ರಮಬದ್ಧ ಕಾರ್ಯಕ್ರಮವಿಲ್ಲ, ಚಿಕ್ಕ ನೀರಾವರಿಯ ಹೊಸ ಯೋಜನೆ ಇಲ್ಲ, ಇರುವ ಕಿರು ಅಣೆಕಟ್ಟುಗಳ ದುರಸ್ತಿ ಇಲ್ಲ. "ವಾರಾಹಿ ಯೋಜನೆ" ಕುರಿತು ಕೇಳಿ ಕೇಳಿ ಕನಸಿನ ಗಂಟಾಗುತ್ತಿದೆಯೇ ಎಂಬ ಅನುಮಾನ ರೈತರಲ್ಲಿ ಮೂಡಿದೆ, ಕಬ್ಬು ಅರೆಯಲು ಕೂಡಾ ಕಾರ್ಖಾನೆಗೆ ಬೇಕಾದಷ್ಟು ನೀರು ಪೂರೈಕೆ ಇಲ್ಲ. ಆಗಾಗ ಉಂಟಾಗುವ ಯಾಂತ್ರಿಕ ತೊಂದರೆ, ನೀರು ಹೊಟ್ಟಿಯ ಸೋರುವಿಕೆ ಇತ್ಯಾದಿಗಳಿಂದ ಮತ್ತಷ್ಟು ಭಾದೆ. ಕಷ್ಟಪಟ್ಟು ಕಬ್ಬು ಬೆಳೆಸಿ, ಕಾರ್ಖಾನೆಗೆ ಪೂರೈಸಿದ ರೈತರಿಗೆ ಸಕಾಲದಲ್ಲಿ ಬೆಲೆ ಪಾವತಿ ಇಲ್ಲ. ಹಣಕಾಸಿನ ಸಮಸ್ಯೆ, ಕೆಲಸ ಮಾಡುತ್ತಿರುವ ನೌಕರರಿಗೆ ಉದ್ಯೋಗ ಭದ್ರತೆ ಇಲ್ಲ. ಎಲ್ಲಕ್ಕೂ ಹೆಚ್ಚಾಗಿ ಕಬ್ಬು ಅರೆಯುವ ಸೀಸನ್‌ನಲ್ಲಿ ಅಧ್ಯಕ್ಷರು ವಿದೇಶದಲ್ಲಿ ವ್ಯವಸ್ಥಾಪಕ ನಿರ್ದೇಶಕರಿಗೆ ವರ್ಗಾವಣೆ, ಅನೇಕ ತಿಂಗಳುಗಳಾದರೂ ಇನ್ನೂ ಮ್ಯಾನೇಜಿಂಗ್ ಡೈರೆಕ್ಟರರೆ ನೇಮಕವಾಗಿಲ್ಲ. ಈ ಎಲ್ಲ ಸಮಸ್ಯೆಗಳ ನಿವಾರಣೆ ಇನ್ನಾದರೂ ಕೂಡಲೇ ಕ್ರಮ ತೆಗೆದುಕೊಳ್ಳಿ ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಬಿ. ಪೋತ್‌ದಾರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜ್‌ರವರು ಏನು ಹೇಳಿದ್ದಾರೆ, ಅದರಲ್ಲಿ ಸತ್ಯಾಂಶ ಇದೆ. ಈ ವಿಷಯವನ್ನು ನಾನು ಕ್ಯಾಬಿನೆಟ್ ಸಬ್-ಕಮಿಟಿಯಲ್ಲಿ ಇಟ್ಟಿದ್ದೇನೆ. ಇದರ ಬಗ್ಗೆ ಬೇಗನೆ ತೀರ್ಮಾನವನ್ನು ಕೈಗೊಳ್ಳುವರಿದ್ದೇವೆ ಮತ್ತೆ ಅಲ್ಲಿ ರೆಗ್ಯುಲರ್ ಎಂ.ಡಿ. ಅವರನ್ನು ಅಪಾಯಿಂಟ್ ಮಾಡಿದ್ದೇವೆ. ಮತ್ತು ಇತರೆ ಗ್ರಿವೆನ್‌ಸಸ್ ಹೇಳಿದ್ದಾರೆ, ಇದರ ಬಗ್ಗೆ ಡೈರೆಕ್ಟರ್ ಆಫ್ ಷುಗರ್ ಅವರಿಗೆ ರಿಕ್ವೆಸ್ಟ್ ಮಾಡಿಕೊಂಡು ಗಮನ ಹರಿಸುವುದಕ್ಕೆ ಹೇಳಿದ್ದೇವೆ. ಒಟ್ಟಿನಲ್ಲಿ ಅಲ್ಲಿರುವ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ,